# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **556 (571)** |
| **ಮಾನ್ಯ ಸದಸ್ಯರ ಹೆಸರು** | : | **ಶ್ರೀ ಎನ್ ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು)** |
| **ಉತ್ತರಿಸುವ ದಿನಾಂಕ** | : | **20.02.2024** |
| **ಉತ್ತರಿಸುವ ಸಚಿವರು** | : | **ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು** |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಬೆಂಗಳೂರು ದಕ್ಷಿಣ ತಾಲ್ಲೂಕು ಉತ್ತರಹಳ್ಳಿ ಹೋಬಳಿ ದೊಡ್ಡಕಲ್ಲಸಂದ್ರ ಗ್ರಾಮದ ಸರ್ವೆ ನಂಬರ್ 55/1(ಪಿ), 55/2(ಪಿ)56,57,58, 59(ಪಿ) ಮತ್ತು 60(ಪಿ) ಯಲ್ಲಿನ 24 ಎಕರೆ ಜಾಗವನ್ನು ಯಾವ ಉದ್ದೇಶಕ್ಕಾಗಿ ಯಾರಿಗೆ ಕೆ.ಐ.ಎ.ಡಿ.ಬಿ ಮುಖಾಂತರ ವಿತರಿಸಲಾಗಿತ್ತು; | ವಿವರಗಳನ್ನು **ಅನುಬಂಧ-ಅ** ರಲ್ಲಿ ನೀಡಲಾಗಿದೆ. |
| ಆ | ಪ್ರಸ್ತುತ ಆ ಜಾಗದಲ್ಲಿ ಯಾವ ಕೈಗಾರಿಕೆ ಪ್ರಾರಂಭಗೊಂಡಿದೆ; ಇದರಿಂದ ಎಷ್ಟು ಕನ್ನಡಿಗರಿಗೆ ಉದ್ಯೋಗ ದೊರೆತಿದೆ; ಈ ಕೈಗಾರಿಕೆಯ ಉತ್ಪನ್ನಗಳೇನು; | ಸದರಿ ಜಾಗದಲ್ಲಿ ಮೆ॥ ಇಸ್ಕಾನ್ ಚಾರಿಟೀಸ್ ರವರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಸಮೂಹ ವಸತಿ ಅಭಿವೃದ್ಧಿ ಯೋಜನೆಗೆ ಅಭಿವೃದ್ಧಿ ನಕ್ಷೆ ಮತ್ತು ಕಟ್ಟಡ ನಕ್ಷೆ ಅನುಮೋದನೆ ಪಡೆದು, ಸಮೂಹ ವಸತಿ ಕಟ್ಟಡಗಳನ್ನು ನಿರ್ಮಾಣ ಮಾಡಿರುವುದು ಕಂಡು ಬಂದಿರುತ್ತದೆ. |
| ಇ | ಸದರಿ ಜಾಗವನ್ನು ಯಾವ ಉದ್ದೇಶಕ್ಕಾಗಿ ನೀಡಲಾಗಿದೆಯೇ ಆ ಉದ್ದೇಶಕ್ಕೆ ಬಳಸಿಕೊಳ್ಳದಿದ್ದಲ್ಲಿ ಸದರಿ ಜಾಗವನ್ನು ಕೆ.ಐ.ಎ.ಡಿ.ಬಿ ಹಿಂದಕ್ಕೆ ಪಡೆದುಕೊಳ್ಳಲು ಯಾವ ಕ್ರಮ ಕೈಗೊಂಡಿದೆ; ಈ ಕುರಿತು ಯಾವಾಗ ನೋಟೀಸ್ ನೀಡಲಾಗಿದೆ; | ಮೆ॥ ಇಸ್ಕಾನ್ ಚಾರಿಟೀಸ್ ರವರಿಗೆ ವಿಸ್ತೀರ್ಣ: 27 ಎಕರೆ 02 ಗುಂಟೆ ಜಮೀನಿಗೆ ಕೈಗಾರಿಕಾ ಉದ್ದೇಶವನ್ನು ಮಾತ್ರ ಬಳಸಲು ನಿಬಂದನೆ ವಿಧಿಸಿ, ಮಂಡಳಿ ವತಿಯಿಂದ ದಿನಾಂಕ: 06.10.2004 ರಂದು ಶುದ್ಧಕ್ರಯ ಪತ್ರವನ್ನು ನೀಡಲಾಗಿರುತ್ತದೆ.<br><br>ತದನಂತರ, ಮೆ॥ ಇಸ್ಕಾನ್ ಚಾರಿಟೀಸ್ ರವರು ಭೂ ಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿದ್ದು, KIADB ವತಿಯಿಂದ ಸದರಿಯವರ ಕೋರಿಕೆಯನ್ನು ಪರಿಗಣಿಸಿರುವುದಿಲ್ಲ.<br><br>ತದನಂತರ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಸಮೂಹ ವಸತಿ ಅಭಿವೃದ್ಧಿ ಯೋಜನೆಗೆ ದಿನಾಂಕ:28.03.2008 ರಂದು ನಕ್ಷೆ ಮತ್ತು ಕಟ್ಟಡ ನಕ್ಷೆಗೆ ಅನುಮೋದನೆ ಪಡೆದಿರುತ್ತದೆ. |

| | | |
|---|---|---|
| ಈ | ಧಾರ್ಮಿಕ ಕೈಗಾರಿಕೆ ಎಂದರೇನು; ರಾಜ್ಯದಲ್ಲಿ ಇದುವರೆಗೆ ಧಾರ್ಮಿಕ ಕೈಗಾರಿಕೆಗೆಂದು ಎಷ್ಟು ಎಕರೆ ಭೂಮಿಯನ್ನು ಕೆ.ಐ.ಎ.ಡಿ.ಬಿ ಮುಖಾಂತರ ಉದ್ಯಮಿಗಳಿಗೆ ಗುತ್ತಿಗೆ/ಮಾರಾಟದ ಮೂಲಕ ವಿತರಿಸಲಾಗಿದೆ; (ಜಿಲ್ಲಾವಾರು ಮಾಹಿತಿ ನೀಡುವುದು) | ಕೈಗಾರಿಕಾ ನೀತಿ ಅನ್ವಯ ದಾರ್ಮಿಕ ಕೈಗಾರಿಕೆ ಎಂದು ವ್ಯಾಖ್ಯಾನ ಇರುವುದಿಲ್ಲ. |
| ಉ | ಯಾವ ಉದ್ದೇಶಕ್ಕೆ ಕೆ.ಐ.ಎ.ಡಿ.ಬಿ ಮುಖಾಂತರ ಉದ್ಯಮಿಗಳಿಗೆ ಗುತ್ತಿಗೆ/ಮಾರಾಟದ ಮೂಲಕ ವಿತರಿಸಲಾಗಿದೆಯೇ; ಆ ಉದ್ದೇಶಕ್ಕೆ ಬಳಸಿಕೊಳ್ಳದ ಎಷ್ಟು ಎಕರೆ ಭೂಮಿಯನ್ನು ಕೆ.ಐ.ಎ.ಡಿ.ಬಿ ಯಿಂದ ಹಿಂದಕ್ಕೆ ಪಡೆದುಕೊಳ್ಳಲಾಗಿದೆ? (ಜಿಲ್ಲಾವಾರು ಮಾಹಿತಿ ನೀಡುವುದು) | ಮಂಡಳಿ ವತಿಯಿಂದ ಕೈಗಾರಿಕಾ ಉದ್ದೇಶಕ್ಕಾಗಿ ಹಂಚಿಕೆ ಮಾಡಿ ಉದ್ಯಮಿಗಳಿಗೆ ಗುತ್ತಿಗೆ ಮೂಲಕ ವಿತರಿಸಲಾಗಿರುವ ನಿವೇಶನಗಳಲ್ಲಿ ಉದ್ದೇಶಿತ ಯೋಜನೆಗೆ ಬಳಸಿಕೊಳ್ಳದ ಪ್ರಕರಣಗಳಿಗೆ KIADB ನಿಯಮದಂತೆ 34-B ನೋಟೀಸ್ ಜಾರಿ ಮಾಡಿ ಕ್ರಮ ಕೈಗೊಳ್ಳಲಾಗುತ್ತಿದೆ. ವಿವರಗಳನ್ನು **ಅನುಬಂಧ-ಆ** ರಲ್ಲಿ ನೀಡಲಾಗಿದೆ. |

**ಸಂಖ್ಯೆ: ಸಿಐ 72 ಐಎಪಿ 2024**

**(ಎಂ.ಬಿ. ಪಾಟೀಲ)**
**ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ**
**ಮೂಲಸೌಲಭ್ಯ ಅಭಿವೃದ್ಧಿ ಸಚಿವರು.**

ಅನುಬಂಧ-ಅ

- ದಿನಾಂಕ: 08.05.1972 ರಂದು ನಡೆದ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಸಭೆಯಲ್ಲಿ ಮೆ| ಶ್ರೀ ಶೈಲ ಕೋ-ಆಪರೇಟಿವ್ ಇಂಡಸ್ಟ್ರಿಯಲ್ ಎಸ್ಟೇಟ್ ಲಿಮಿಟೆಡ್ ರವರ ಉದ್ದೇಶಿತ ವಾಚ್ ಪಾರ್ಟ್ಸ್ ರಫ್ತು ಯೋಜನೆಗೆ ಬೆಂಗಳೂರು ಜಿಲ್ಲೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ ದೊಡ್ಡಕಲ್ಲಸಂದ್ರ ಗ್ರಾಮದ ಸರ್ವೆ ನಂ. 54/1, 54/3, 55/1, 55/2, 55/3, 55/4, 55/5, 56, 57, 58, 59, 60 ರ ಒಟ್ಟು 41 ಎಕರೆ 6 ಗುಂಟೆ ಜಮೀನನ್ನು ಭೂಸ್ವಾಧೀನಗೊಳಿಸಿ ಹಂಚಿಕೆ ಮಾಡಲು ನಿರ್ಣಯ ಕೈಗೊಳ್ಳಲಾಗಿರುತ್ತದೆ.

- ಮಂಡಳಿಯು ತೆಗೆದುಕೊಂಡ ನಿರ್ಣಯದ ಮೇರೆಗೆ ಮೆ|| ಶ್ರೀ ಶೈಲ ಕೋ-ಆಪರೇಟಿವ್ ಇಂಡಸ್ಟ್ರಿಯಲ್ ಎಸ್ಟೇಟ್ ಲಿಮಿಟೆಡ್ ರವರಿಗೆ ಬೆಂಗಳೂರು ಜಿಲ್ಲೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ ದೊಡ್ಡಕಲ್ಲಸಂದ್ರ ಗ್ರಾಮದ ಸರ್ವೆ ನಂ. 55/1, 55/2, 55/3, 55/4, 55/5, 56, 57, 58, 59, 60 ರ ಒಟ್ಟು 41 ಎಕರೆ 6 ಗುಂಟೆ ಜಮೀನನ್ನು ಮಂಡಳಿ ಹಂಚಿಕೆ ಮಾಡಲಾಗಿದೆ ಮತ್ತು ದಿನಾಂಕ:19.05.1972 ರಂದು ಹಂಚಿಕೆ ಪತ್ರ ನೀಡಲಾಗಿದೆ. ಸದರಿ ಜಮೀನಿನ ಕಬ್ಜೆಯನ್ನು ದಿನಾಂಕ: 23.08.1972 ರಂದು ನೀಡಲಾಗಿದೆ.

- ಮೆ|| ಶ್ರೀ ಶೈಲ ಕೋ-ಆಪರೇಟಿವ್ ಇಂಡಸ್ಟ್ರಿಯಲ್ ಎಸ್ಟೇಟ್ ಲಿಮಿಟೆಡ್ ರವರ ಜಮೀನುಗಳಿಗೆ ಮಂಡಳಿಯೊಂದಿಗೆ ಗುತ್ತಿಗೆ ಕರಾರು ಪತ್ರವನ್ನು ನೆರವೇರಿಸುವಂತೆ ದಿನಾಂಕ: 09.10.1974 ರಂದು ಬರೆದ ಪತ್ರದಲ್ಲಿ ಕೋರಲಾಗಿದ್ದು, ಸದರಿ ಸಂಸ್ಥೆಯು ಮಂಡಳಿಯೊಂದಿಗೆ ಗುತ್ತಿಗೆ ಕರಾರು ಪತ್ರವನ್ನು ನೆರವೇರಿಸಿರುವುದಿಲ್ಲ.

- ಮೆ|| ಶ್ರೀ ಶೈಲ ಕೋ-ಆಪರೇಟಿವ್ ಇಂಡಸ್ಟ್ರಿಯಲ್ ಎಸ್ಟೇಟ್ ಲಿಮಿಟೆಡ್ ರವರ ದಿನಾಂಕ: 08.12.1973 ರ ಪತ್ರದ ಕೋರಿಕೆಯ ಮೇರೆಗೆ ಮಂಡಳಿಯು ಹಂಚಿಕೆ ಮಾಡಿರುವ 41 ಎಕರೆ 6 ಗುಂಟೆ ಜಮೀನನ್ನು 18 ವಿವಿಧ ಖಾಸಗಿ ಹಂಚಿಕೆಗಳಿಗೆ ಕೈಗಾರಿಕೆ ಅನುಷ್ಠಾನ ಮಾಡಲು ಪ್ರತಿ ಕಂಪನಿಗೆ 1 ½

ಎಕರೆ ಜಮೀನನ್ನು ನೀಡಲು ಮಂಡಳಿಯು ಒಪ್ಪಿಗೆ ನೀಡಿರುತ್ತದೆ. ಬಾಕಿ ಉಳಿದ 14 ಎಕರೆ 6 ಗುಂಟೆ ಜಮೀನನ್ನು ಮೆ|| ಶ್ರೀ ಶೈಲ ಕೋ-ಆಪರೇಟಿವ್ ಇಂಡಸ್ಟ್ರಿಯಲ್ ಎಸ್ಟೇಟ್ ಲಿಮಿಟೆಡ್ ಸಂಸ್ಥೆಯು ಮೇಲ್ಕಂಡ ಕೈಗಾರಿಕೆಗಳಿಗೆ ನಾಗರೀಕ ಸೌಲಭ್ಯಗಳನ್ನು ಒದಗಿಸಲು ಉಪಯೋಗಿಸಿಕೊಳ್ಳಲು ಅನುಮತಿ ನೀಡಲಾಗಿರುತ್ತದೆ.

- ಮುಂದುವರೆದು, ಮೇಲ್ಕಂಡ 18 ಕೈಗಾರಿಕೆಗಳಿಗೆ ರಸ್ತೆ ಸಂಪರ್ಕ ಕಲ್ಪಿಸಲು 16 ಗುಂಟೆ ಜಮೀನನ್ನು ನೀಡಿ, ಉಳಿಕೆ 13 ಎಕರೆ 28 ಗುಂಟೆ ಜಮೀನಿಗೆ ಮೆ| ಶ್ರೀ ಶೈಲ ಕೋ-ಆಪರೇಟಿವ್ ಇಂಡಸ್ಟ್ರಿಯಲ್ ಎಸ್ಟೇಟ್ ಲಿಮಿಟೆಡ್ ರವರಿಗೆ ದಿನಾಂಕ:01.06.2004 ರಂದು ಪರಿಷ್ಕೃತ ಕಬ್ಜೆಯನ್ನು ನೀಡಲಾಗಿದೆ.

- ಕಂಪನಿ ಪಿಟಿಷನ್ ಸಂಖ್ಯೆ: 18/1980 ರ ಸಂಬಂಧ ಕರ್ನಾಟಕ ಉಚ್ಚ ನ್ಯಾಯಾಲಯ ಸದರಿ ಎನ್ಸಿಲರಿ ಕಂಪನಿಗಳನ್ನು ಸ್ಥಾಪನೆ ಮಾಡಲು ಹಾಗೂ ಕೆ.ಎಫ್.ಎಸ್.ಸಿ ರವರು ಸಲ್ಲಿಸಿದ್ದ ಅರ್ಜಿಯ ಮೇರೆಗೆ ದಿನಾಂಕ: 10.09.1993 ರಂದು ಆದೇಶ ಮಾಡಿ ಸದರಿ ಕಂಪನಿಗಳ ವಶದಲ್ಲಿದ್ದ ಜಮೀನನ್ನು ಕ್ರಯಕ್ಕೆ ನೀಡಲು ಮತ್ತು ಕ್ರಯ ಮಾಡಿ ಬಂದ ಹಣದಲ್ಲಿ ಕೆಐಎಡಿಬಿಗೆ ಕ್ಲೈನ್ ಸೆಟ್ಲ್ ಮಾಡಲು ಆದೇಶ ನೀಡಿದೆ.

- ಮೆ|| ಶ್ರೀ ಶೈಲ ಕೋ-ಆಪರೇಟಿವ್ ಇಂಡಸ್ಟ್ರಿಯಲ್ ಎಸ್ಟೇಟ್ ಲಿಮಿಟೆಡ್ ರವರು ಸಲ್ಲಿಸಿದ್ದ ಕಂಪನಿ ಅರ್ಜಿ ಸಂಖ್ಯೆ:1961/2006 ಸಿ/ಡಬ್ಲ್ಯು ಕಂಪನಿ ಅರ್ಜಿ ಸಂಖ್ಯೆಗಳು 25 ಮತ್ತು 84/2004 ಉಬ್ ಸಿಓಪಿ ಸಂಖ್ಯೆಗಳು: 17, 28, 15, 13, 18, 25, 20, 19, 12, 26, 27, 16, 29, 22, 21 ಮತ್ತು 14/1980 ರ ಸಂಬಂಧ ಕರ್ನಾಟಕ ಉಚ್ಚ ನ್ಯಾಯಾಲಯ ದಿನಾಂಕ: 20.02.2004 ರಂದು ಮಾಡಿರುವ ಆದೇಶದಲ್ಲಿ ಕೆ.ಎಸ್.ಎಫ್.ಸಿ ಯು ಇಸ್ಕಾನ್ ಚಾರಿಟೀಸ್ ರವರಿಗೆ ದಿನಾಂಕ: 19.12.2003 ರಂದು ಸಾರ್ವಜನಿಕ ಹರಾಜಿನ ಮೂಲಕ ನೀಡಿದ್ದ ಕ್ರಯವನ್ನು ಸ್ಥಿರೀಕರಿಸಿದೆ.

- ವ್ಯವಸ್ಥಾಪಕ ಟ್ರಸ್ಟಿ, ಇಸ್ಕಾನ್ ಚಾರಿಟೀಸ್ ರವರು ದಿನಾಂಕ:25.03.2004 ರಂದು ಮಂಡಳಿಗೆ ಬರೆದಿರುವ ಪತ್ರದಲ್ಲಿ ಕರ್ನಾಟಕ ಉಚ್ಚ ನ್ಯಾಯಾಲದ ದಿನಾಂಕ: 20.02.2004 ರಂದು ಮಾಡಿದ್ದ

ಆದೇಶವನ್ನು ಉಲ್ಲೇಖಿಸಿ ಮಂಡಳಿಯು ಮೆ॥ ಶ್ರೀ ಶೈಲ ಕೋ-ಆಪರೇಟಿವ್ ಇಂಡಸ್ಟ್ರಿಯಲ್ ಎಸ್ಟೇಟ್ ಲಿಮಿಟೆಡ್ ರವರಿಗೆ ಗುತ್ತಿಗೆ ಮೇಲೆ ನೀಡಿದ್ದ 24 ಎಕರೆ ಜಮೀನನ್ನು ಕ್ರಯ ಮಾಡಿಕೊಡಲು ಕೋರಿತ್ತು. ಇದೇ ಪತ್ರದಲ್ಲಿ ಕೆ.ಎಸ್.ಎಫ್.ಸಿ ಯು ಸದರಿ ಜಮೀನನ್ನು ಇಸ್ಕಾನ್ ಚಾರಿಟರೀಸ್ ನೀಡಿದೆಯೆಂದು ತಿಳಿಸಿತ್ತು.

➤ ಕಾರ್ಯನಿರ್ವಹಕ ನಿವೇಶಕರು, ಕರ್ನಾಟಕ ರಾಜ್ಯ ಹಣಕಾಸು ನಿಗಮ ನಿಯಮಿತ ರವರು ದಿನಾಂಕ:31.03.2004 ರಂದು ಮಂಡಳಿಗೆ ಬರೆದಿರುವ ಪತ್ರಗಳಲ್ಲಿ ಸದರಿ ನಿಗಮವು ಮಾನ್ಯ ಉಚ್ಚ ನ್ಯಾಯಾಲಯ ಎಕ್ಸಿಕ್ಯೂಟಿವ್ ಪಿಟಿಷನ್ ನಂ. 665/92 & 664/92 ರಲ್ಲಿ ನೀಡಿರುವ ನಿರ್ದೇಶನದನ್ವಯ ನಿವೇಶನ ಸಂಖ್ಯೆ: 1 ರಲ್ಲಿ 1.50 ಎಕರೆ ಮತ್ತು 17 ರಲ್ಲಿ 1.50 ಎಕರೆ ಮಾಡಿರುವುದರಿಂದ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಸದರಿ ಜಮೀನನ್ನು ಮೆ॥ ಇಸ್ಕಾನ್ ಚಾರಿಟೀಸ್ ರವರಿಗೆ ಕ್ರಯ ಪತ್ರಮಾಡಿಕೊಡುವಂತೆ ಕೋರಿದ್ದರು.

➤ ಮೆ॥ ಇಸ್ಕಾನ್ ಚಾರಿಟೀಸ್ ರವರು ಮಾನ್ಯ ಉಚ್ಚ ನ್ಯಾಯಾಲಯದ ಮುಂದೆ CA No.194/2004 in COP Nos. 17, 18, 15, 13, 18, 25, 20, 19, 12, 26, 27, 16, 29, 22, 21 & 14/1980 ಸಲ್ಲಿಸಿ, ಪ್ರತಿವಾದಿ-18 ಕೆ.ಐ.ಎ.ಡಿ.ಬಿ ಜಾಯಿಂಗ್ ಮೆಮೋ ಮೂಲಕ ದಿನಾಂಕ:23.06.2004 ರಂದು ಮಾಡಿರುವ ಆದೇಶದ ಮೇರೆಗೆ ಶುದ್ಧಕ್ರಯ ಪತ್ರ ನೀಡುವಂತೆ ಮಂಡಳಿಗೆ ನಿರ್ದೇಶನ ನೀಡಲು ಕೋರಿದ್ದರು.

➤ ಮಂಡಳಿಯು ದಿನಾಂಕ: 08.07.2004 ರಂದು ಇಸ್ಕಾನ್ ಚಾರಿಟೀಸ್ ರವರಿಗೆ 27ಎ-02ಗು ಜಮೀನಿನ ಕಬ್ಜೆಯನ್ನು ನೀಡಿದೆ ಮತ್ತು ಅಂದೇ ಸ್ವಾಧೀನ ಪತ್ರವನ್ನು ಸಹ ನೀಡಿದೆ.

➤ ಕೆ.ಐ.ಎ.ಡಿ.ಬಿ ದಿನಾಂಕ: 18.08.2004 ರಂದು ತನ್ನ 259ನೇ ಮಂಡಳಿಯ ಸಭೆಯಲ್ಲಿ ಇಸ್ಕಾನ್ ಚಾರಿಟೀಸ್ ರವರಿಗೆ 27ಎ-02ಗು ಜಮೀನಿಗೆ ಸಂಬಂಧಿಸಿದಂತೆ ಈಗಾಗಲೇ ಪಾವತಿ ಮಾಡಿರುವ ಅಂತಿಮ ದರದಲ್ಲಿ ಶುದ್ಧಕ್ರಯ ಪತ್ರ ನೀಡಲು ನಿರ್ಣಯ ತೆಗೆದುಕೊಂಡಿದೆ.

- ಈ ನಿರ್ಣಯದ ಮೇರೆಗೆ ಮಂಡಳಿಯು 27ಪಿ-02ಗು ಜಮೀನಿಗೆ ಸಂಬಂಧಿಸಿದಂತೆ ಇಸ್ಕಾನ್ ಚಾರಿಟೀಸ್ ರವರಿಗೆ ದಿನಾಂಕ: 06.10.2004 ರಂದು ಕ್ರಯ ಪತ್ರ ನೀಡಿದೆ ಮತ್ತು ಸದರಿ ಕ್ರಯ ಪತ್ರದಲ್ಲಿ ಕೇವಲ ಕೈಗಾರಿಕಾ ಉದ್ದೇಶಕ್ಕಾಗಿ ಮಾತ್ರ ಬಳಸಲು ನಿಬಂಧನೆ ವಿಧಿಸಿದೆ.

- ಮಾಹಿತಿ ಪ್ರವಾಸೋದ್ಯಮ ಮತ್ತು ಯುವಜನ ಸೇವಾ ಇಲಾಖೆ, ಕರ್ನಾಟಕ ಸರ್ಕಾರ ಸಂಖ್ಯೆ:52 ಟಿಟಿಎಂ 2005 ದಿನಾಂಕ:28.06.2005 ರಂದು ಹೊರಡಿಸಿರುವ ಆದೇಶದಲ್ಲಿ ದಿನಾಂಕ:30.12.2004 ರಂದು SHLCC ರಿಂದ ಇಸ್ಕಾನ್ ಚಾರಿಟೀಸ್ ರವರ ಪರಿಷ್ಕೃತ ಯೋಜನೆ Establishment of IT & BPO Park, Theme Park entrance pavilion & ropeway landing station ಗೆ ಸಂಬಂಧಿಸಿದಂತೆ ಕೈಗೊಂಡ ನಿರ್ಣಯದ ಹಿನ್ನೆಲೆಯಲ್ಲಿ ಪರಿಷ್ಕೃತ ಯೋಜನೆಗೆ ಅಭಿವೃದ್ಧಿ ಮತ್ತು ಕಟ್ಟಡ ನಕ್ಷೆ ಅನುಮೋದನೆ ನೀಡಿದೆ.

- ಮೆ|| ಇಸ್ಕಾನ್ ಚಾರಿಟೀಸ್ ರವರು ಪರಿಷ್ಕೃತ ಅನುಮೋದನೆಗೊಂಡ ಯೋಜನೆಯನ್ನು ಅಭಿವೃದ್ಧಿಪಡಿಸದೆ, ಈ ಮೇಲ್ಕಂಡ 27ಪಿ-02ಗು ಜಮೀನಿಗೆ ಸಂಬಂಧಿಸಿದಂತೆ ಭೂ ಉಪಯೋಗ ಬದಲಾವಣೆಗೆ ಅನುಮತಿ ನೀಡಲು ಇಸ್ಕಾನ್ ಚಾರಿಟೀಸ್ ರವರು ದಿನಾಂಕ: 29.08.2008 ರಂದು ಮಂಡಳಿಗೆ ಮನವಿ ಸಲ್ಲಿಸಿದ್ದರು. ಸದರಿ ಮನವಿಯನ್ನು ಪರಿಶೀಲಿಸಿ ಇಸ್ಕಾನ್ ಚಾರಿಟೀಸ್ ರವರಿಗೆ ದಿನಾಂಕ: 25.10.2008 ರಂದು ಬರೆದಿರುವ ಪತ್ರದಲ್ಲಿ ಈ ವಿಷಯದಲ್ಲಿ ಬಿಡಿಎ/ಬಿಎಂಆರ್‌ಡಿಎ/ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರ ರವರನ್ನು ಸಂಪರ್ಕಿಸಬೇಕೆಂದು ತಿಳಿಸಲಾಗಿದೆ.

- ಮುಂದುವರೆದು, ಮೆ|| ಇಸ್ಕಾನ್ ಚಾರಿಟೀಸ್ ರವರು ಮೇಲೆ ತಿಳಿಸಿರುವ ಜಮೀನಿನಲ್ಲಿ ಸಮೂಹ ವಸತಿ ಅಭಿವೃದ್ಧಿ ಯೋಜನಾ ನಕ್ಷೆಯನ್ನು ಅನುಮೋದಿಸುವ ಬಗ್ಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ದಿನಾಂಕ: 28.03.2008 ರ ತನ್ನ ಕಾರ್ಯಾದೇಶದಲ್ಲಿ, ಸದರಿ ಯೋಜನೆಗೆ ಅನುಮೋದನೆಯನ್ನು ನೀಡಿದ್ದು ಹಾಗೂ ಅಭಿವೃದ್ಧಿ ಮತ್ತು ಕಟ್ಟಡ ನಕ್ಷೆಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ರವರು ಅನುಮೋದಿಸಿರುತ್ತಾರೆ.

➢ ಮೇಲೆ ತಿಳಿಸಿರುವ ಸಮೂಹ ವಸತಿ ಅಭಿವೃದ್ಧಿ ಯೋಜನಾ ನಕ್ಷೆಗೆ ಕೆಐಎಡಿಬಿ ಮಂಡಳಿಯಿಂದ ಯಾವುದೇ ಅಭಿವೃದ್ಧಿ ಮತ್ತು ಕಟ್ಟಡ ನಕ್ಷೆಯನ್ನು ಅನುಮೋದಿಸಿರುವುದಿಲ್ಲ.

➢ ಸದರಿ ಯೋಜನೆಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ರವರು ಅಭಿವೃದ್ಧಿ ಮತ್ತು ಕಟ್ಟಡ ನಕ್ಷೆಯನ್ನು ಅನುಮೋದಿಸಿದೆ.

ಕಾರ್ಯದರ್ಶಿಗಳು-2.

**KARNATAKA INDUSTRIAL AREAS DEVELOPMENT BOARD**
**LIST OF CASES 34-B NOTICE ISSUED FOR NON IMPLEMENTATION OF PROJECT**

| Sl. No | District | Industrial Area | No of Units (34-B cases) | Extent in Acres | Resumed (No. of units) | Extent in acres |
|---|---|---|---|---|---|---|
| 1 | Baglakote | Green Food Park | 1 | 53.1 | 1 | 53.1 |
| 2 | Bangalore Urban | Hitech, Defence and Aerospace Park (IT Sector) | 43 | 99.29 | 2 | 15.48 |
| | | Hitech, Defence and Aerospace Park (Hardware Sector) | 14 | 28.33 | 0 | 0 |
| 3 | Bangalore Rural | Aerospace | 19 | 28.68 | 1 | 1.7 |
| | | Aerospace SEZ | 2 | 25.5 | 0 | 0 |
| | | Sompura 1st & 2nd | 147 | 153.72 | 12 | 8.74 |
| | | Avverahalli | 39 | 54.5 | 1 | 1.7 |
| | | Obdenahalli | 11 | 6.85 | 0 | 0 |
| | | Kumbalagudu | 1 | 0.41 | 1 | 0.41 |
| | | Doddanekundi | 1 | 1.86 | 1 | 1.86 |
| | | Kadugodi | 1 | 78 | 0 | 0 |
| | | Hoskote | 1 | 3.02 | 0 | 0 |
| 4 | Belagavi | Honaga | 3 | 1.7 | 1 | 1 |
| | | Kanabargi | 29 | 3.86 | 0 | 0 |
| | | Yarmanapura village SUC | 1 | 39.32 | 0 | 0 |
| | | Kittur | 13 | 8.5 | 0 | 0 |
| 5 | Ballari | Mudargi 2nd stage | 1 | 0.5 | 0 | 0 |
| | | Mudargi 4th stage | 2 | 1.02 | 1 | 0.52 |
| | | Ananthapura Road | 1 | 0.42 | 0 | 0 |
| | | SUC | 1 | 4674 | 0 | 0 |
| 6 | Bidar | Kolhar Phase 2 | 9 | 15.91 | 1 | 1.97 |
| | | Humnabad | 3 | 2.28 | 0 | 0 |
| 7 | Vijayanagara | Sankalapura 2nd Phase | 9 | 2.89 | 0 | 0 |
| 8 | Chikkaballapura | Gowribidanur 1st Phase | 21 | 49.03 | 0 | 0 |
| | | Gowribidanur 2nd Phase | 23 | 23.81 | 0 | 0 |
| 9 | Chikkamagaluru | Ambale | 1 | 0.92 | 0 | 0 |
| 10 | Dakshina Kannada | Baikampady | 4 | 1.33 | 2 | 0.68 |
| | | Baikampady (JESCO Land) | 6 | 12.16 | 0 | 0 |
| | | EPIP | 8 | 41.05 | 2 | 26.99 |
| | | Tannirbavi | 1 | 4.93 | 0 | 0 |
| | | IT SEZ | 1 | 1.99 | 0 | 0 |
| | | SUC | 3 | 552.37 | 1 | 548.69 |
| 11 | Dharwad | Belur | 15 | 12.74 | 0 | 0 |
| | | Rayapur | 1 | 1 | 0 | 0 |
| | | Lakammanahalli | 2 | 0.44 | 0 | 0 |
| | | Gamanagatti | 10 | 7.78 | 0 | 0 |
| 12 | Gadag | Narasapura | 3 | 1 | 0 | 0 |
| 13 | Kalaburagi | Nandur-Kesratagi 1st Stage | 58 | 104.75 | 1 | 1 |

| Sl. No | District | Industrial Area | No of Units (34-B cases) | Extent in Acres | Resumed (No. of units) | Extent in acres |
|---|---|---|---|---|---|---|
| 14 | Hassan | Hassan Growth Centre | 10 | 14.5 | 2 | 9.95 |
| | | Hassan Growth Centre (Hardware ) | 1 | 250 | 1 | 250 |
| | | Textile SEZ | 1 | 1.99 | 0 | 0 |
| | | Thimmanahalli | 1 | 2 | 0 | 0 |
| 15 | Kolar | Malur 1st & 2nd Phase | 9 | 14.12 | 0 | 0 |
| | | Malur 3rd Phase | 3 | 2.13 | 0 | 0 |
| | | Malur 4th Phase | 11 | 11.32 | 0 | 0 |
| | | Tamaka | 3 | 3.76 | 0 | 0 |
| | | Bangarpete | 3 | 3.94 | 0 | 0 |
| | | Narasapura | 15 | 16.64 | 0 | 0 |
| | | Jakkasandra | 7 | 11.16 | 1 | 1 |
| | | Vemgal | 5 | 6.56 | 0 | 0 |
| 16 | Mandya | Gejjalagere | 2 | 7.91 | 0 | 0 |
| | | Hebbal 2nd Phase | 2 | 1.72 | 0 | 0 |
| | | Somanahally | 5 | 4.35 | 0 | 0 |
| | | Tubinakere | 17 | 27.72 | 0 | 0 |
| 17 | Mysore | Belvadi | 1 | 0.25 | 0 | 0 |
| | | Hebbal IA | 11 | 5.39 | 0 | 0 |
| | | Hootgahally | 4 | 1 | 0 | 0 |
| | | Koorgally | 5 | 29.21 | 2 | 0.5 |
| | | Belagola | 9 | 7.12 | 0 | 0 |
| | | Thandya | 2 | 6.98 | 0 | 0 |
| 18 | Raichur | Raichur Growth Centre | 6 | 25.75 | 3 | 4.5 |
| | | Manvi General Industrial Area | 1 | 0.5 | 0 | 0 |
| | | Manvi Auto Nagar | 42 | 2.87 | 0 | 0 |
| 19 | Ramanagara | Harohalli Industrial Area, 1st Phase. | 3 | 4 | 0 | 0 |
| | | Harohalli Industrial Area, 2nd Phase. | 40 | 35.47 | 2 | 1.5 |
| | | Bidadi 2nd Phase sector-1 | 1 | 1 | 0 | 0 |
| | | Bidadi 2nd Phase sector-2 | 17 | 6.22 | 0 | 0 |
| 20 | Davanagere | Karur | 4 | 2.83 | 0 | 0 |
| | | Hanagawadi | 4 | 0.97 | 0 | 0 |
| 21 | Shivamogga | Mangalabesu | 3 | 0.09 | 0 | 0 |
| | | Nidige | 7 | 6.41 | 0 | 0 |
| 22 | Tumkur | Vasanthanarasapura 1st Phase | 56 | 69.97 | 0 | 0 |
| | | Vasanthanarasapura 2nd Phase | 188 | 180.21 | 0 | 0 |
| | | Hirehalli | 1 | 0.17 | 0 | 0 |
| | | Antharasanahalli 2nd Phase | 1 | 1.31 | 1 | 0.49 |
| 23 | Udupi | Nandikur | 12 | 5.98 | 0 | 0 |
| 24 | U. Kannada | Shirwad | 2 | 0.84 | 0 | 0 |

| Sl. No | District | Industrial Area | No of Units (34-B cases) | Extent in Acres | Resumed (No. of units) | Extent in acres |
|---|---|---|---|---|---|---|
| 25 | Yadgir | Kadechur I.A | 6 | 8 | 0 | 0 |
| 26 | Vijayapura | Mahalbhagyat | 6 | 5.48 | 0 | 0 |
| | | Aliyabad Block-I | 5 | 7.24 | 0 | 0 |
| | | Aliyabad Block-II | 20 | 108.89 | 0 | 0 |
| | | **Total** | **1061** | **7002.93** | **40** | **931.78** |